ಅಧ್ಯಾಯ – 13

# ನಿಗಮವು ನೀಡುತ್ತಿರುವ ರಿಯಾಯಿತಿ ವಿವರಗಳು

**[ಸೆಕ್ಷನ್ 4(1) (ಬಿ) (xiii)]**

**ರಿಯಾಯಿತಿ ವಿವರಗಳು:**

1) ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್:
ವಿದ್ಯಾರ್ಥಿಗಳಿಗೆ ಅವರ ವಾಸಸ್ಥಾನದಿಂದ ಶೈಕ್ಷಣಿಕ ಕೇಂದ್ರಕ್ಕೆ ಹೋಗಿ ಬರಲು ಒಂದು ಮಾರ್ಗದಲ್ಲಿ ಗರಿಷ್ಠ ೫೦ ಕಿ.ಮೀ. ದೂರದ ವರೆಗೆ ಪ್ರಯಾಣಿಸಲು ರಿಯಾಯಿತಿ ದರದ ಪಾಸುಗಳನ್ನು ಶೈಕ್ಷಣಿಕ ಹಂತವಾರು ನೀಡಲಾಗುತ್ತಿದೆ.

2) ಮಾಸಿಕ ಬಸ್ ಪಾಸ್:
ನಿಗದಿತ ಮಾರ್ಗದಲ್ಲಿ ಪ್ರತಿ ದಿನ ಪ್ರಯಾಣಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಮಾಸಿಕ ಬಸ್ ಪಾಸುಗಳು.

3) ಸ್ವಾತಂತ್ರ್ಯ ಟಿಕೇಟುಗಳು:
ಇಚ್ಛೆ ಬಂದ ಕಡೆ ಬಳಸಿ ಒಂದು ವಾರ ಕಾಲ ಸತತವಾಗಿ ಪ್ರಯಾಣಿಸಬಹುದಾದ ಸ್ವಾತಂತ್ರ್ಯ ಟಿಕೇಟುಗಳು.

4) ಅಂಧರ ಉಚಿತ ಬಸ್ ಪಾಸ್:
ಪೂರ್ಣ ಅಂಧರಿಗೆ ನೀಡುವ ಉಚಿತ ಬಸ್ ಪಾಸುಗಳು.

5) ಅಂಗವಿಕಲರ ರಿಯಾಯಿತಿ ಬಸ್ ಪಾಸ್:
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಗುರುತಿಸುವ ಅಂಗವಿಕಲರಿಗೆ ರಿಯಾಯಿತಿ ದರದ ಬಸ್ ಪಾಸುಗಳು.

6) ಸ್ವಾತಂತ್ರ್ಯ ಹೋರಾಟಗಾರರ ಬಸ್ ಪಾಸ್:
ರಾಜ್ಯ ಸರ್ಕಾರವು ಗುರುತಿಸುವ ಸ್ವಾತಂತ್ರ್ಯ ಹೋರಾಟಗಾರರಿಗೆ ನಿಗಮದ ಸಾಮಾನ್ಯ, ವೇಗದೂತ ಮತ್ತು ರಾಜಹಂಸ ಬಸ್ಸುಗಳಲ್ಲಿ ರಾಜ್ಯದೊಳಗೆ ಮತ್ತು ಅಂತರ ರಾಜ್ಯ ಪ್ರದೇಶಗಳಲ್ಲಿ ಉಚಿತವಾಗಿ ಸಂಚರಿಸಲು ಬಸ್ ಪಾಸುಗಳು.

7) ಪತ್ರಕರ್ತರ ಬಸ್ ಪಾಸ್:
ಪತ್ರಕರ್ತರಿಗೆ ನಿಗಮದ ನಗರ ಮತ್ತು ನಗರ ಹೊರವಲಯ ಸಾರಿಗೆಗಳಲ್ಲಿ ಪ್ರಯಾಣಿಸಲು ರಿಯಾಯಿತಿ ಬಸ್ ಪಾಸ್‌ಗಳು.

೮) ಅರ್ಜುನ ಪ್ರಶಸ್ತಿ ವಿಜೇತರಿಗೆ, ಒಲಂಪಿಯನ್ ಮತ್ತು ಪ್ಯಾರಾ ಒಲಂಪಿಯನ್ ಸ್ಪರ್ಧಾಳುಗಳಿಗೆ ಬಸ್ ಪಾಸ್‌ಗಳು.